RNU AIR DHARWAD

## SEPTEMBER 28,2024
## ALL INDIA RADIO- DHARWAD
## PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ವಿವೇಕಾದಿತ್ಯ ಕನಿಯಾಲ**

<><><>

**ಮುಖ್ಯಾಂಶಗಳು:**

- **ಗದಗ ಜಿಲ್ಲೆ ಲಕ್ಕುಂಡಿ ಗ್ರಾಮದ ಸ್ಮಾರಕಗಳನ್ನು, 'ಯುನೆಸ್ಕೋ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರಿಸಲು, ಪ್ರಸ್ತಾವ – ಎಚ್.ಕೆ. ಪಾಟೀಲ.**
- **ಕಲಬುರಗಿಯಲ್ಲಿ ಸಾವಿರ ಎಕರೆ ಭೂಮಿ, 'ಪ್ರಧಾನಮಂತ್ರಿ ಮಿತ್ರ ಟೆಕ್ಸ್‌ಟೈಲ್ ಪಾರ್ಕ್ ಯೋಜನೆಗೆ, ಮೀಸಲು – ಸಚಿವ ಶಿವಾನಂದ ಪಾಟೀಲ.**
- **ಗುಡ್ಡಾಪುರದ ಶ್ರೀ ದಾನಮ್ಮದೇವಿ ಕ್ಷೇತ್ರದಲ್ಲಿ, ನಾಡಿದ್ದು 30ನೇ ತಾರೀಖು, ಹೊರನಾಡ ಕನ್ನಡಿಗರ ಸಮಾವೇಶ – ಸೋಮಣ್ಣ ಬೇವಿನಮರದ.**
- **ಪ್ರಧಾನಮಂತ್ರಿ ಜನಜಾತೀಯ ಉನ್ನತ ಗ್ರಾಮ ಅಭಿಯಾನ: ಉತ್ತರಕನ್ನಡ ಜಿಲ್ಲೆಯ 31 ಗ್ರಾಮಗಳು ಆಯ್ಕೆ – ಕೆ.ಲಕ್ಷ್ಮೀ ಪ್ರಿಯಾ.**

<><><>

**ಈಗ ವಾರ್ತೆಗಳ ವಿವರ**

<><><>

**'ಯುನೆಸ್ಕೋ ವಿಶ್ವ ಪಾರಂಪರಿಕ ತಾಣಗಳ ಪಟ್ಟಿ'ಗೆ, ಶಿಲ್ಪ ಕಲೆಗೆ ಪ್ರಸಿದ್ಧವಾದ, ಗದಗ ಜಿಲ್ಲೆ ಲಕ್ಕುಂಡಿ ಗ್ರಾಮದ ಸ್ಮಾರಕಗಳನ್ನು ಸೇರಿಸುವಂತೆ, ರಾಜ್ಯ ಸರ್ಕಾರ ಪ್ರಸ್ತಾವ ಸಲ್ಲಿಸಲಿದೆ ಎಂದು, ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ತಿಳಿಸಿದ್ದಾರೆ.**

**ಗದಗ ನಗರದ ಇತಿಹಾಸ ಪ್ರಸಿದ್ಧ, ಶ್ರೀ ವೀರ ನಾರಾಯಣ ದೇವಸ್ಥಾನದಲ್ಲಿ, 'ಪ್ರವಾಸೋದ್ಯಮ ಮತ್ತು ಶಾಂತಿ' ಧ್ಯೇಯದೊಂದಿಗೆ ಆಯೋಜಿತ, ವಿಶ್ವ ಪ್ರವಾಸೋದ್ಯಮ ದಿನಾಚರಣೆ ಉದ್ಘಾಟಿಸಿ, ಅವರು ಮಾತನಾಡಿದರು.**

**ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು, ರಾಜ್ಯ ಸರ್ಕಾರ ಹೊಸ ಪ್ರವಾಸೋದ್ಯಮ ನೀತಿ ಜಾರಿಗೊಳಿಸಲು ಸಿದ್ಧತೆ ನಡೆಸಿದೆ ಎಂದರು.**

<><><>

**ಎಚ್.ಕೆ. ಪಾಟೀಲ ಧ್ವನಿ 53 ಸೆಕೆಂದುಗಳು**

<><><>

ಸಾವಿರದ 600 ವರ್ಷಗಳ ಹಿಂದೆ ನಡೆದ, ಯುದ್ಧದ ವಿಜಯದ ಸಂಕೇತವಾಗಿ, ಗದಗ ಜಿಲ್ಲೆ, ಕೊಣ್ಣೂರಿನಲ್ಲಿ ನಿರ್ಮಾಣಗೊಂಡ, ಐತಿಹಾಸಿಕ ಶ್ರೀ ಪರಮೇಶ್ವರ ದೇವಸ್ಥಾನದ ಪುನರುಜ್ಜೀವನ ಕಾರ್ಯ ಕೈಗೊಳ್ಳಲಾಗುವುದು ಎಂದು, ಜಿಲ್ಲಾ ಉಸ್ತುವಾರಿ ಹಾಗೂ ಪ್ರವಾಸೋದ್ಯಮ ಖಾತೆ ಸಚಿವ ಎಚ್.ಕೆ. ಪಾಟೀಲ ತಿಳಿಸಿದ್ದಾರೆ.

ಮೈಸೂರಿನ ಪುರಾತತ್ವ ಸರ್ವೇಕ್ಷಣೆ ಮತ್ತು ಪಾರಂಪರಿಕ ಇಲಾಖೆ ಸಹಯೋಗದಲ್ಲಿ, ಒಂದೂವರೆ ಕೋಟಿ ರೂಪಾಯಿ ಅನುದಾನದಲ್ಲಿ, ಕೊಣ್ಣೂರಿನ ಐತಿಹಾಸಿಕ ಶ್ರೀ ಪರಮೇಶ್ವರ ದೇವಾಲಯದ, ಸಂರಕ್ಷಣಾ ಕಾಮಗಾರಿಯ ಭೂಮಿ ಪೂಜೆ ನೆರವೇರಿಸಿ, ಅವರು ಮಾತನಾಡಿದರು.

ಸಚಿವ ಸಂಪುಟ ಸಭೆಯಲ್ಲಿ, ಬೆಣ್ಣಿ ಹಳ್ಳದ ಪ್ರವಾಹ ನಿರ್ಬಂಧಿಸಲು ಹಾಗೂ ಪಾತಳಿ ಹಿಗ್ಗಿಸುವ ಕಾಮಗಾರಿಗೆ, 200 ಕೋಟಿ ರೂಪಾಯಿಗಳ ಯೋಜನೆಯನ್ನು ಅನುಮೋದಿಸಲಾಗಿದೆ. ಬೆಣ್ಣಿ ಹಳ್ಳದ 16 ಟಿ.ಎಂ.ಸಿ. ಅಡಿ ನೀರನ್ನು, ಸಮರ್ಪಕವಾಗಿ ಬಳಸಲು, ಸರ್ಕಾರ ಯೋಜಿಸಿದೆ ಎಂದು ಸಚಿವ ಎಚ್.ಕೆ. ಪಾಟೀಲ ಹೇಳಿದರು.

<><><>

ಭಾರತ ಹಿರಿದಾದ ಕಲೆ, ಸಂಸ್ಕೃತಿ ಹಾಗೂ ವಾಸ್ತುಶಿಲ್ಪಗಳಿಗೆ, ವಿಶ್ವ ವಿಖ್ಯಾತಿ ಪಡೆದಿದೆ. ಬಹುಮೂಲ್ಯ ಸ್ಮಾರಕಗಳ ಸಮರ್ಪಕ ನಿರ್ವಹಣೆ ಪ್ರತಿಯೊಬ್ಬರ ಜವಾಬ್ದಾರಿ ಎಂದು, ರಾಜ್ಯಸಭೆ ಸಂಸದ ನಾರಾಯಣಸಾ ಭಾಂಡಗೆ ಹೇಳಿದ್ದಾರೆ.

ಬಾಗಲಕೋಟೆ ಜಿಲ್ಲೆ, ಕೂಡಲಸಂಗಮ ದೇವಸ್ಥಾನದ ಆವರಣದಲ್ಲಿ, ವಿಶ್ವ ಪ್ರವಾಸೋದ್ಯಮ ದಿನಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

ಮನಸ್ಸನ್ನು ಅರಳಿಸುವ, ಧನಾತ್ಮಕತೆ ಎಡೆಗೆ ಕರೆದೊಯ್ಯುವ, ಅತುಲ್ಯ ಭಾರತದ ಪ್ರವಾಸ ನಮಗೆ, ವಿಶ್ವ ಮಾನವತೆಯನ್ನು ಪರಿಚಯಿಸುತ್ತದೆ ಎಂದರು.

<><><>

ದೇಶದ ಏಳು 'ಪ್ರಧಾನಮಂತ್ರಿ ಮಿತ್ರ ಟೆಕ್ಸ್‌ಟೈಲ್ ಪಾರ್ಕ್ ಯೋಜನೆ'ಗಳ ಪೈಕಿ, ರಾಜ್ಯಕ್ಕೆ ಒಂದು ಯೋಜನೆ ಮಾತ್ರ ಲಭಿಸಿದ್ದು, ಕಲಬುರಗಿಯಲ್ಲಿ ಜವಳಿ ಉದ್ಯಾನಕ್ಕೆ ಮೂಲಸೌಕರ್ಯ ಕಲ್ಪಿಸಲು, ರಾಜ್ಯ ಸರ್ಕಾರ, 390 ಕೋಟಿ ರೂಪಾಯಿ ಬಿಡುಗಡೆ ಮಾಡಲಿದೆ ಎಂದು, ಜವಳಿ ಮತ್ತು ಕೃಷಿ ಮಾರುಕಟ್ಟೆ ಖಾತೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆ, ಬೆಂಗಳೂರಿನಲ್ಲಿ ಆಯೋಜಿಸಿದ್ದ, ಕೃಷಿ ಉತ್ಪನ್ನ ಮಾರುಕಟ್ಟೆ ವರ್ತಕರು ಹಾಗೂ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆಗಳ ಅಧ್ಯಕ್ಷರ ಸಮಾವೇಶದಲ್ಲಿ, ಅವರು ಮಾತನಾಡಿದರು.

'ಪಿ.ಎಂ. ಮಿತ್ರ ಟೆಕ್ಸ್‌ಟೈಲ್ ಪಾರ್ಕ್ ಯೋಜನೆ'ಗೆ ಕಲಬುರಗಿಯಲ್ಲಿ, ಒಂದು ಸಾವಿರ ಎಕರೆ ಭೂಮಿ ಹಂಚಿಕೆ ಮಾಡಿ, ಖಾತೆ ಕೂಡ ಮಾಡಿಸಿಕೊಡಲಾಗಿದೆ, ಎಂದರು.

ಮೂಲಸೌಕರ್ಯ ಕಲ್ಪಿಸಲು, 50 ಕೋಟಿ ರೂಪಾಯಿ ಈಗಾಗಲೇ ಹಂಚಿಕೆ ಮಾಡಲಾಗಿದೆ. ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ, ಕಲಬುರಗಿಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ, 390 ಕೋಟಿ ರೂಪಾಯಿ ಹೆಚ್ಚುವರಿಯಾಗಿ ಬಿಡುಗಡೆ ಮಾಡಲು, ನಿರ್ಧರಿಸಲಾಗಿದೆ ಎಂದು ಸಚಿವ ಶಿವಾನಂದ ಪಾಟೀಲ ಹೇಳಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ, ಜತ್ತ ತಾಲೂಕಿನ ಗುಡ್ಡಾಪುರದ ಶ್ರೀ ದಾನಮ್ಮದೇವಿ ಕ್ಷೇತ್ರದಲ್ಲಿ, ನಾಡಿದ್ದು 30ನೇ ತಾರೀಖು, ಗಡಿನಾಡ ಚೇತನ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಹೊರನಾಡ ಕನ್ನಡಿಗರ ಸಮಾವೇಶ ಆಯೋಜಿಸಲಾಗಿದೆ ಎಂದು, ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ತಿಳಿಸಿದ್ದಾರೆ.

ವಿಜಯಪುರದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಪ್ರೊಫೆಸರ್ ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿ, 2023 ನೇ ಸಾಲಿಗೆ, ಪೂಜ್ಯ ಶ್ರೀ ಡಾಕ್ಟರ್ ಚನ್ನಬಸವ ಪಟ್ಟದ್ದೇವರು ಗಡಿನಾಡಿನ ಚೇತನ ಪ್ರಶಸ್ತಿಗೆ, ಕಾಸರಗೋಡಿನ ರಾಧಾಕೃ ್ಣ ಕೆ. ಉಳಿಯತ್ತಡ ಅವರನ್ನು ಆಯ್ಕೆ ಮಾಡಿದೆ ಎಂದರು.

ಡಾಕ್ಟರ್ ಜಯದೇವಿ ತಾಯಿ ಲಿಗಾಡೆ, ಗಡಿನಾಡ ಚೇತನ ಪ್ರಶಸ್ತಿಗೆ, ಬೀದರಿನ ಪಂಚಾಕ್ಷರಿ ಪುಣ್ಯಶೆಟ್ಟಿ ಹಾಗೂ ನಾಡೋಜ ಡಾಕ್ಟರ್ ಕಯ್ಯಾರ ಕಿಞ್ಞಣ್ಣ ರೈ ಗಡಿನಾಡ ಚೇತನ ಪ್ರಶಸ್ತಿಗೆ, ಬೆಳಗಾವಿಯ ಬಿ.ಎಸ್. ಗವಿಮಠ ಆಯ್ಕೆಯಾಗಿದ್ದಾರೆ ಎಂದು, ತಿಳಿಸಿದರು.

ಪ್ರಸಕ್ತ 2024ನೇ ಸಾಲಿಗೆ, ಕ್ರಮವಾಗಿ ಗುಜರಾತಿನ ಅಹ್ಮದಾಬಾದಿನ ಕರ್ನಾಟಕ ಸಂಘ, ಮಹಾರಾಷ್ಟ್ರದ ಸಂಖದ ಶಿವಲಿಂಗೇಶ್ವರ ಶಿಕ್ಷಣ ಸಂಸ್ಥೆ ಹಾಗೂ ಉಮದಿಯ ಸರ್ವೋದಯ ಶಿಕ್ಷಣ ಸಂಸ್ಥೆ, ಕೇರಳದ ಕಾಸರಗೋಡಿನ ಪೆರಡಾಲ ನೀರ್ಚಾಲು, ಕುಂಬಳೆ ದಾರಿ, ಮಹಾಜನ ವಿದ್ಯಾಭಿವರ್ಧಕ ಸಂಘವನ್ನು ಆಯ್ಕೆ ಮಾಡಲಾಗಿದೆ ಎಂದು, ಮಾಹಿತಿ ನೀಡಿದರು.

<><><>

ಕೊಡವ ಸಾಹಿತ್ಯ ಅಕಾದೆಮಿ ಹಾಗೂ ಬೇಂಗ್‌ನಾಡ್ ಕೊಡವ ಸಮಾಜದ ಸಹಯೋಗದಲ್ಲಿ, ಇಂದು ಬೆಳಗ್ಗೆ 9 ಗಂಟೆಗೆ, ಹರದಾಸ ಅಪ್ಪನೆರವಂಡ ಅಪ್ಪಚ್ಚ ಕವಿಗಳ, 157ನೇ ಜನ್ಮ ದಿನದ ಪ್ರಯುಕ್ತ, ಕೊಡಗು ಜಿಲ್ಲೆ, ವಿರಾಜಪೇಟೆ ತಾಲೂಕು ಚೇರಂಬಾಣೆ ಪಟ್ಟಣದಲ್ಲಿ, "ಕೊಡವ ಸಾಹಿತ್ಯ ನಾಳ್" ಕಾರ್ಯಕ್ರಮ ಏರ್ಪಡಿಸಲಾಗಿದೆ.

ಕೊಡವ ಸಾಹಿತ್ಯ ಅಕಾದೆಮಿಯ ಅಧ್ಯಕ್ಷ ಅಜ್ಜಿನಿಕಂಡ ಸಿ. ಮಹೇಶ್ ನಾಚಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ.

ಸಮಾರಂಭವನ್ನು, ಜಿಲ್ಲಾ ಉಸ್ತುವಾರಿ ಸಚಿವ ಎನ್. ಎಸ್. ಬೋಸರಾಜು, ಉದ್ಘಾಟಿಸಲಿದ್ದಾರೆ.

<><><>

ಧಾರವಾಡ ಜಿಲ್ಲಾಧಿಕಾರಿ ದಿವ್ಯಾ ಪ್ರಭು ಜಿ.ಆರ್.ಜೆ ಅವರಿಗೆ, ಪ್ರಸಕ್ತ ವ ್ಷದ ಅತ್ಯುತ್ತಮ ಜಿಲ್ಲಾಧಿಕಾರಿ ಪ್ರಶಸ್ತಿ ಸಂದಿದೆ.

ಚಿತ್ರದುರ್ಗ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅವರಿಗೆ, ಅತ್ಯುತ್ತಮ ಕಂದಾಯ ಅಧಿಕಾರಿ ಪ್ರಶಸ್ತಿ ಲಭಿಸಿದೆ.

ಕಂದಾಯ ಖಾತೆ ಸಚಿವ ಕೃ ್ಣ ಬೈರೇಗೌಡ ಅವರು, ವಿಕಾಸಸೌಧದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಿದರು.

ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, ತಮ್ಮ ಅಧಿಕಾರಾವಧಿಯಲ್ಲಿ, ಜನಸ್ನೇಹಿಯಾಗಿ ರಾಜ್ಯ ಸರಕಾರದ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವಲ್ಲಿ ಧಾರವಾಡ ಮತ್ತು ಚಿತ್ರದುರ್ಗ ಜಿಲ್ಲಾಧಿಕಾರಿಗಳು ಯಶಸ್ವಿಯಾಗಿದ್ದಾರೆ. ಕಂದಾಯ ಇಲಾಖೆಯ ಹಲವು ಸೇವೆಗಳನ್ನು, ಸಾರ್ವಜನಿಕರಿಗೆ ಅತ್ಯುತ್ತಮ ರೀತಿಯಲ್ಲಿ ತಲುಪಿಸಿದ್ದಾರೆ ಎಂದು, ಶ್ಲಾಘಿಸಿದರು.

ಧಾರವಾಡ ಜಿಲ್ಲಾಧಿಕಾರಿ ದಿವ್ಯಾ ಪ್ರಭು ಜಿ.ಆರ್.ಜೆ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಧಾರವಾಡ ಜಿಲ್ಲಾಧಿಕಾರಿ ದಿವ್ಯಾ ಪ್ರಭು ಜಿ.ಆರ್.ಜೆ ಧ್ವನಿ ಸೆಕೆಂದುಗಳು

<><><>

ಪ್ರಧಾನಮಂತ್ರಿ ಜನಜಾತೀಯ ಉನ್ನತ ಗ್ರಾಮ ಅಭಿಯಾನದಡಿ, ಉತ್ತರಕನ್ನಡ ಜಿಲ್ಲೆಯ 31 ಗ್ರಾಮಗಳು ಆಯ್ಕೆಯಾಗಿವೆ ಎಂದು, ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ತಿಳಿಸಿದ್ದಾರೆ.

ಹಳಿಯಾಳ ತಾಲೂಕಿನ 1, ಭಟ್ಕಳದ 3, ಜೋಯಿಡಾದ ನಾಲ್ಕು ಮತ್ತು ಮುಂಡಗೋಡ ತಾಲೂಕಿನ 23 ಸೇರಿದಂತೆ, ಒಟ್ಟು 31 ಗ್ರಾಮಗಳನ್ನು ಕೇಂದ್ರ ಆಯ್ಕೆ ಮಾಡಿದೆ.

'ಬುಡಕಟ್ಟು ಬಹುಸಂಖ್ಯಾತ ಗ್ರಾಮಗಳು ಮತ್ತು ಮಹತ್ವಾಕಾಂಕ್ಷಿ ಜಿಲ್ಲೆಗಳಲ್ಲಿ ಬುಡಕಟ್ಟು ಕುಟುಂಬಗಳ ಹಾಗೂ ಬುಡಕಟ್ಟು ಸಮುದಾಯಗಳ, ಸಮಾಜೋ-ಆರ್ಥಿಕ ಸ್ಥಿತಿ ಸುಧಾರಿಸಲು, ಪ್ರಧಾನಮಂತ್ರಿ ಜನಜಾತಿಯ ಉನ್ನತ ಗ್ರಾಮ ಅಭಿಯಾನ ಕಾರ್ಯಕ್ರಮ ದೇಶದಾದ್ಯಂತ ನಡೆಯಲಿದೆ' ಎಂದು, ಜಿಲ್ಲಾಧಿಕಾರಿ ಮಾಹಿತಿ ನೀಡಿದ್ದಾರೆ.

ಈ ಅಭಿಯಾನಕ್ಕಾಗಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮೀಸಲಿರಿಸಿದ, 79 ಸಾವಿರದ 156 ಕೋಟಿ ರೂಪಾಯಿಗಳನ್ನು ಬಳಸಿಕೊಂಡು, ಪರಿಶಿ ್ಟ ಪಂಗಡದವರು ಹೆಚ್ಚಿನ ಸಂಖ್ಯೆಯಲ್ಲಿರುವ, ದೇಶದ 63 ಸಾವಿರ ಗ್ರಾಮಗಳನ್ನು ಅಭಿವೃದ್ಧಿ ಪಡಿಸಲು, ಕ್ರಿಯಾ ಯೋಜನೆ ರೂಪಿಸಿದೆ. 5 ಕೋಟಿ ಜನರಿಗೆ ಈ ಯೋಜನೆಯಿಂದ ಅನುಕೂಲವಾಗಲಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನಾಳೆ, ಭಾನುವಾರ 11 ಗಂಟೆಗೆ ದೇಶದ ಜನತೆಯನ್ನುದ್ದೇಶಿಸಿ, 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ, ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಲಿದ್ದಾರೆ.

ಇದು ಮನದ ಮಾತಿನ 114ನೇ ಸಂಚಿಕೆಯಾಗಿದೆ.

ಆಕಾಶವಾಣಿ ಹಾಗೂ ದೂರದರ್ಶನದ ಎಲ್ಲ ವಾಹಿನಿಗಳು ಹಾಗೂ ಜಾಲತಾಣಗಳಲ್ಲಿ, ಮನ್ ಕಿ ಬಾತ್ ಬಿತ್ತರಗೊಳ್ಳಲಿದೆ.

3ನೇ ಅವಧಿಗೆ ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ, ನರೇಂದ್ರ ಮೋದಿ ಅವರ ನಾಲ್ಕನೇ ಮನದ ಮಾತು, ಇದಾಗಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

ಇಂದು ವಿಶ್ವ ರೇಬಿಸ್ ಜಾಗೃತಿ ದಿನ. ರೇಬಿಸ್ ಹರಡುವಿಕೆಯನ್ನು ತಡೆಗಟ್ಟುವ ಹಾಗೂ ಸಾಕುಪ್ರಾಣಿಗಳಿಗೆ ಮುಂಜಾಗ್ರತಾ ಲಸಿಕೆ ಹಾಕಿಸುವ ಮಹತ್ವ ಸಾರುವ ದಿನ.

ಸುದೃಢ ಮಗು ದೇಶದ ಆಸ್ತಿ. ತಾಯಿ ಮತ್ತು ಮಗುವಿಗೆ ಆರೈಕೆ ಖಾತ್ರಿ ಪಡಿಸುವುದು, ರಾಷ್ಟ್ರೀಯ ಪೋಷಣ ಅಭಿಯಾನದ ಉದ್ದೇಶ, ಎಂದು ಉತ್ತರಕನ್ನಡ ಜಿಲ್ಲೆ ಸಿವಿಲ್ ನ್ಯಾಯಾಧೀಶರಾದ ಲಕ್ಷ್ಮೀಬಾಯಿ ಪಾಟೀಲ ಹೇಳಿದ್ದಾರೆ. ಯಲ್ಲಾಪುರ ಪಟ್ಟಣದ ಗಣಪತಿ ಗಲ್ಲಿ ಅಂಗನವಾಡಿ ಕೇಂದ್ರದಲ್ಲಿ ಪೋಷಣ ಅಭಿಯಾನ ಉದ್ಘಾಟಿಸಿದರು.

ಬೆಳಗಾವಿ ಜಿಲ್ಲೆಯ, ಬೆಲ್ಲ ಹಾಗೂ ಅರಿಷಿಣವನ್ನು ರಫ್ತು ಮಾಡಲು, ರೈತರಿಗೆ ತರಬೇತಿ ಕಾರ್ಯಕ್ರಮ, ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಗದಗ ಜಿಲ್ಲೆ ಲಕ್ಕುಂಡಿ ಗ್ರಾಮದ ಸ್ಮಾರಕಗಳನ್ನು, 'ಯುನೆಸ್ಕೋ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರಿಸಲು, ಪ್ರಸ್ತಾವ – ಎಚ್.ಕೆ. ಪಾಟೀಲ.
- ಕಲಬುರಗಿಯಲ್ಲಿ ಸಾವಿರ ಎಕರೆ ಭೂಮಿ, 'ಪ್ರಧಾನಮಂತ್ರಿ ಮಿತ್ರ ಟೆಕ್ಸ್‌ಟೈಲ್ ಪಾರ್ಕ್ ಯೋಜನೆಗೆ, ಮೀಸಲು – ಸಚಿವ ಶಿವಾನಂದ ಪಾಟೀಲ.
- ಗುಡ್ಡಾಪುರದ ಶ್ರೀ ದಾನಮ್ಮದೇವಿ ಕ್ಷೇತ್ರದಲ್ಲಿ, ನಾಡಿದ್ದು 30ನೇ ತಾರೀಖು, ಹೊರನಾಡ ಕನ್ನಡಿಗರ ಸಮಾವೇಶ – ಸೋಮಣ್ಣ ಬೇವಿನಮರದ.
- ಪ್ರಧಾನಮಂತ್ರಿ ಜನಜಾತೀಯ ಉನ್ನತ ಗ್ರಾಮ ಅಭಿಯಾನ: ಉತ್ತರಕನ್ನಡ ಜಿಲ್ಲೆಯ 31 ಗ್ರಾಮಗಳು ಆಯ್ಕೆ – ಕೆ.ಲಕ್ಷ್ಮೀ ಪ್ರಿಯಾ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>